**ಅಪರ  ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ನ್ಯಾಯಾಲಯ ವಿರಾಜಪೇಟೆ**

**ಸಿ.ಸಿ. 375/2025**

ಫಿರ್ಯಾದಿ  ಃ  ಮಹಮ್ಮದ್ ಸೈಯದ್.ಎ.ವೈ
ತಂದೆಃ ಎ.ವೈ.ಯೂಸಫ್
ಪ್ರಾಯ 25 ವರ್ಷ
ವಾಸಃ ಕೊಂಡಗೇರಿ ಗ್ರಾಮ
ಅಮ್ಮತ್ತಿ ಹೋಬಳಿ
ವಿರಾಜಪೇಟೆ.

**---ವಿರುದ್ಧ --**

ಆರೋಪಿ  ಃ  ಸಂಗೀತ.ಎಂ.ಎನ್
ತಂದೆಃ ಸಂತ
ಪ್ರಾಯ 29 ವರ್ಷ
ವಾಸಃ ಕಾರ್ಮಾಡು ಗ್ರಾಮ
ಅಮ್ಮತ್ತಿ ಹೋಬಳಿ
ವಿರಾಜಪೇಟೆ ತಾಲ್ಲೂಕು.

**ಆರೋಪಿಯಾದ ನಿಮ್ಮ ವಿರುದ್ಧ ಇರುವ ಆಪಾದನೆ ಏನೆಂದರೆ**

**ಆಪಾದನೆ**

ಏನೆಂದರೆ ಆರೋಪಿಯಾದ ನೀವು ಮತ್ತು ಫಿರ್ಯಾದಿದಾರರು ಹಲವಾರು ವರ್ಷಗಳಿಂದ ಪರಿಚಯಸ್ಥರಾಗಿರುತ್ತೀರಿ. ಆರೋಪಿಯಾದ ನೀವು ಡಿಸಂಬರ್ **2024** ರ ಮೊದಲನೇ ವಾರದಂದು ಫಿರ್ಯಾದಿದಾರರ ಕಡೆಯಿಂದ ರೂ**.1,50,000/-** ಹಣವನ್ನು ನಿಮ್ಮ ತುರ್ತು ಅವಶ್ಯಕತೆಗಾಗಿ ಪಡೆದುಕೊಂಡಿರುತ್ತೀರಿ. ಸದರಿ ಸಾಲದ ಹಣವನ್ನು ಪಾವತಿ ಮಾಡಲು ಆರೋಪಿಯಾದ ನೀವು ಫಿರ್ಯಾದಿದಾರರಿಗೆ ದಿನಾಂಕಃ**08.01.2025** ರಂದು ಕೆನರಾ ಬ್ಯಾಂಕ್**,** ಅಮ್ಮತ್ತಿ ಶಾಖೆಗೆ ಸೇರಿದ **post dated** ಚೆಕ್ ಸಂಖ್ಯೆಃ**075924** ಅನ್ನು ರೂ**.1,50,000/-** ಗಳಿಗೆ ನೀಡಿರುತ್ತೀರಾ**.** ಸದರಿ ಚೆಕ್‌ನನ್ನು ಫಿರ್ಯಾದಿಯು ತನ್ನ ಬ್ಯಾಂಕ್ ಆದ **Bank of Baroda,** ಅಮತ್ತಿ ಶಾಖೆಗೆ ನಗದೀಕರಣಕ್ಕಾಗಿ ದಿನಾಂಕಃ **21.01.2025** ರಂದು ಸಲ್ಲಿಸಿದಾಗ "ಸಾಕಷ್ಟು ಹಣವಿಲ್ಲ" ಎಂಬ

ಕಾರಣದಿಂದ ಹಿಂಬರಹದೊಂದಿಗೆ ದಿನಾಂಕಃ **23.01.2025** ರಂದು ಚೆಕ್ ವಾಪಸ್ಸು ಬಂದಿರುತ್ತದೆ**.**

ನಂತರ ಫಿರ್ಯಾದಿ ತನ್ನ ವಕೀಲರ ಮೂಲಕ ದಿನಾಂಕಃ**21.02.2025** ರಂದು ನೋಂದಾಯಿತ ಅಂಚೆ ಮೂಲಕ ನೋಟೀಸ್ ಅನ್ನು ನೀಡಿದ್ದರೂ ಸಹ ಆರೋಪಿಯಾದ ನೀವು ಯಾವುದೇ ಹಣವನ್ನು ಮರುಪಾವತಿ ಮಾಡಿರುವುದಿಲ್ಲ**.** ಆದ್ದರಿಂದ ನೀವು ವರ್ಗಾವಣೀಯ ಲಿಖಿತಗಳ ಕಾಯಿದೆ ಕಲಂ **138** ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಮಾಡಿರುತ್ತೀರಿ ಎಂದು ಆಪಾದಿಸಲಾಗಿದೆ**.**

**ಆರೋಪಿಯ ಹೇಳಿಕೆ**

1. ಪ್ರಶ್ನೆ - ಈಗ ಓದಿ ಹೇಳಿದ ಆಪಾದನೆ ನಿಮಗೆ ತಿಳಿಯಿತೆ.?

ಉತ್ತರಃ yes

2. ಪ್ರಶ್ನೆ - ಈ ಆರೋಪಣೆಯ ಬಗ್ಗೆ ನೀವು ನಿಮ್ಮ ತಪ್ಪು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆಯಾಗಬೇಕೇ?

ಉತ್ತರಃ Plea is prepared. Substance of accusation is read over and explained to the accused in Kannada language. The accused pleaded not guilty and claimed to be tried

(ಈ ಆರೋಪಣೆಯನ್ನು ದಿನಾಂಕಃ06.11.2025 ರಂದು ಆರೋಪಿಗೆ ತಿಳಿದ ಭಾಷೆಯಲ್ಲಿ ಓದಿ, ಹೇಳಿ,ವಿವರಿಸಿ, ಅವರಿಂದ ಉತ್ತರ ಪಡೆದು ನಾನೇ ಸ್ವತಃ ದಾಖಲಿಸಿದ್ದೇನೆ.)

ಸ್ಥಳ ಃ**ವಿರಾಜಪೇಟೆ** sd/-

ದಿ:**06.11.2025** **ಪ್ರದೀಪ ಪೋತದಾರ**

**C/C ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,**
**ವಿರಾಜಪೇಟೆ.**